ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-೬೫

ಯಡಿಯೂರು ಹೋಬಳಿಯಲ್ಲಿ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 25.10.2013

ಈ ವಾರದ ಮುನ್ಸೂಚನೆ (ದಿನಾಂಕ 26-10-13 to 30.10.13 ವರೆಗೆ)

ನಿಯತಾಂಕಗಳು	26.10.13	27.10.13	28.10.13	29.10.13	30.10.13
ಮಳೆ (ಮಿ ಮಿ)	4	6	3	5	11
ಗರಿಷ್ಠ ಉಷ್ಣಾಂಶ(ಡಿ.ಸೆ.)	28	30	29	29	29
ಕನಿಷ್ಠ ಉಷ್ಣಾಂಶ (ಡಿ.ಸೆ.)	20	20	20	21	21
ಮೋಡ (ಪ್ರಮಾಣ)	8	8	7	6	7
ಅರ್ದ್ರತೆ ೭.೨೦ ಬೆ (ಶೇ)	92	92	90	90	88
ಅರ್ದ್ರತೆ ೨.೨೦ ಮ (ಶೇ)	79	71	79	67	67
ಗಾಳಿಯ ವೇಗ (ಕಿ.ಮಿ/ಗಂಟೆಗೆ)	6	6	6	4	4
ಗಾಳಿಯ ದಿಕ್ಕು (ಡಿಗ್ರಿ)	210	240	280	300	40

ಈ ವಾರದ ಮುನ್ಸೂಚನೆಯ ಪ್ರಕಾರ ಮತ್ತು ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಭಾಗಶಃ ಮೋಡ ಕವಿದ ವಾತಾವರಣವಿದ್ದು ಸಂಜೆ ಅಥವಾ ರಾತ್ರಿಯ ವೇಳೆಯಲ್ಲಿ ಹಗುರದಿಂದ ಸಾದಾರಣ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ 28.0-30.0^{o}C ಮತ್ತು ಕನಿಷ್ಠ 20-21^{o}C ಇರಲಿದೆ. ಬೆಳಗಿನ ಅರ್ದ್ರತೆ ಪ್ರಮಾಣ ಶೇ 88-92% ಇದ್ದು ಮಧ್ಯಾಹ್ನ 67-79 % ಇದ್ದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 4-6 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಬಿತ್ತನೆ ಮಾಡದ ಪ್ರದೇಶದಲ್ಲಿ ಸಾಕಷ್ಟು ತೇವಾಂಶವಿದ್ದಲ್ಲಿ ಅಲ್ಪಾವಧಿಯ ದ್ವಿದಳ ದಾನ್ಯ ಬೆಳೆ ತಳಿಗಳಾದ ಹುರಳಿ (ಕೆ,ಬಿ,ಹೆಚ್-1, ಪಿ,ಹೆಚ್,ಜಿ-9) ಬಿತ್ತನೆ ಮಾಡುವುದು ಉತ್ತಮ.
- ರಾಗಿ ಮತ್ತು ಮುಸುಕಿನ ಜೋಳಕ್ಕೆ ಶಿಫಾರಸ್ಸು ಮಾಡಿದ ಸಾರಜನಕ ಮೇಲುಗೊಬ್ಬರ ಕೊಡಲು ಸೂಚಿಸಲಾಗಿದೆ.
- ರಾಗಿಯಲ್ಲಿ ಬೆಂಕಿರೋಗವಿರುವುದು ಕಂಡುಬಂದಿದೆ ಆದ್ದರಿಂದ ರೋಗ ಬಂದಿರುವ ಕಡೆ ಬಾವಿಸ್ಟಿನ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸವುದು ಒಳ್ಳೆಯದು.
- ನೆಲೆಗಡಲೆಗೆ ಬೆಳೆಯಲ್ಲಿ ಎಲೆಚುಕ್ಕೆ ರೋಗ (ಟಿಕ್ಕಾ) ಬರುವ ಲಕ್ಷಣಗಳಿರುವುದರಿಂದ ಕಾರ್ಬೆಂಡೈಜಿಮ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸಲು ಸೂಚಿಸಲಾಗಿದೆ.
- ತೊಗರಿಯಲ್ಲಿ ಗೂಡು ಮಾರು ಅಥವಾ ಹೂ ಗೊಂಚಲು ಮತ್ತು ಎಲೆಯ ಸುಳಿಯನ್ನು ಮುದುಡಿ ಬಲೆ ಕಟ್ಟುವ ಹುಳು ಕಂಡುಬಂದಲ್ಲಿ ಮಿಥೊಮಿಲ್ 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸಲು ಸೂಚಿಸಲಾಗಿದೆ.
- ದನಕರುಗಳಿಗೆ ಕಾಲುಬಾಯಿ ರೋಗ ಕಂಡುಬಂದಿರುವುದರಿಂದ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವದು.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.